ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1. ವಿವರಗಳು ಈ ಕೆಳಗಿನಂತಿವೆ :

ಕ್ರಮ ಸಂಖ್ಯೆ	ತಾಲ್ಲೂಕು	ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ	
		1995-96	1996-97
1.	ಹಾಸನ	70	110
2.	ಸಕಲೇಶಪುರ	42	33
3.	ಆಲೂರು	46	109
4.	ಬೇಲೂರು	68	64
5.	ಅರಕಲಗೂಡು	82	90
6.	ಸಿ.ಆರ್. ಪಟ್ಟಣ	137	110
7.	ಹೊಳೆನರಸೀಪುರ	90	91
8.	ಅರಸೀಕೆರೆ	129	81
	ಒಟ್ಟು	**664**	**697**

2. ಇವುಗಳಲ್ಲಿ 1317 ಕೊಳವೆ ಬಾವಿಗಳು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿವೆ.

3. ಕೈಪಂಪು ಕೊಳವೆ ಬಾವಿಗಳು ಕೆಟ್ಟಾಗ ಚಿಕ್ಕಪುಟ್ಟ ದುರಸ್ತಿಗಳನ್ನು ಆಯಾ ಗ್ರಾಮಪಂಚಾಯತಿಗಳೇ ಮಾಡಿಕೊಳ್ಳುತ್ತವೆ. ದೊಡ್ಡಪ್ರಮಾಣದ ದುರಸ್ತಿ ಕುರಿತು ದೂರುಗಳು ಬಂದ ಕೂಡಲೇ ಸಂಬಂಧಿಸಿದ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗ ಕಛೇರಿಯಲ್ಲಿ ದಾಖಲಿಸಿಕೊಂಡು ಸಂಚಾರಿ ದುರಸ್ತಿ ವಾಹನಗಳ ಮೂಲಕ ದುರಸ್ತಿ ಕೈಗೊಳ್ಳಲಾಗುತ್ತದೆ.

ಯೋಜನಾ ಸಮಿತಿಗಳ ಕುರಿತು.

1825 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ಯೋಜನಾ ಸಮಿತಿಗಳು ಅಸ್ತಿತ್ವಕ್ಕೆ ಬಂದಿದ್ದು ಅವು ರೂಪುಗೊಳ್ಳದೇ ಇರುವುದಕ್ಕೆ ಕಾರಣಗಳೇನು?

ಆ) 1997-98ನೇ ಸಾಲಿನಲ್ಲಿ ಆರ್ಥಿಕ ವರ್ಷ ಪ್ರಾರಂಭವಾಗಿದ್ದು ಎಲ್ಲಾ ಕ್ರಿಯಾ ಯೋಜನೆಗಳು ಈ ಸಮಿತಿಯ ಮುಂದೆ ಬರಬೇಕಾಗಿದ್ದು, ಈ ಸಮಿತಿಯು ರೂಪುಗೊಳ್ಳದೇ

ಇರುವುದರರಿಂದ ಕ್ರಿಯಾ ಯೋಜನೆ ಅನುಮೋದಿಸುವ ಪ್ರಾಧಿಕಾರ ಯಾವುದು. ಹಾಗೂ ಯಾರು ಅಧಿಕಾರ ಚಲಾಯಿಸುತ್ತಿದ್ದಾರೆ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸಲು ಸದಸ್ಯರ ಚುನಾವಣೆಗಳು 17 ಜಿಲ್ಲೆಗಳಲ್ಲಿ ನಡೆದಿದ್ದು, ರಾಜ್ಯ ಸರ್ಕಾರ 7 ಹೊಸ ಜಿಲ್ಲೆಗಳನ್ನು ರಚಿಸಲು ಆದೇಶ ಹೊರಡಿಸಿರುವುದರಿಂದ ಅಧ್ಯಕ್ಷರ ಚುನಾವಣೆ ಮುಂದೂಡಲಾಗಿದೆ. ಇದರಿಂದಾಗಿ ಜಿಲ್ಲಾ ಯೋಜನಾ ಸಮಿತಿಗಳು ಕಾರ್ಯಾರಂಭ ಮಾಡಿರುವುದಿಲ್ಲ.

ಆ) ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಸಾಮಾನ್ಯ ಸಭೆಯಲ್ಲಿ ಕ್ರಿಯಾ ಯೋಜನೆಗಳನ್ನು ಅನುಮೋದಿಸಲಾಗುತ್ತಿದೆ. ಅಂತಹ ಕ್ರಿಯಾ ಯೋಜನೆಯನ್ನು ಮೇಲಿನ ಹಂತದ ಪಂಚಾಯಿತಿಗೆ ಮಾಹಿತಿಗಾಗಿ ಮತ್ತು ಪರಿಶೀಲನೆಗಾಗಿ ಸಲ್ಲಿಸಲಾಗುತ್ತಿದೆ. ಮೇಲಿನ ಹಂತದ ಪಂಚಾಯಿತಿಗಳು ಕ್ರಿಯಾ ಯೋಜನೆಗಳನ್ನು ನಿಯಮಕ್ಕನುಗುಣವಾಗಿ ರೂಪಿಸಲಾಗಿದೆಯೇ ಎಂದು ಪರಿಶೀಲಿಸುತ್ತವೆ.

ಶಾಲೆಗಳಲ್ಲಿ ಹೆಚ್ಚು ವಿಭಾಗ ತೆರೆಯಲು ಮಂಜೂರಾತಿ.

1826 - ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಲಾ ಪ್ರವೇಶಾವಕಾಶದ ಸಮಯದಲ್ಲಿ ಖಾಸಗಿ ಶಾಲೆಗಳಲ್ಲಿ ಮಕ್ಕಳ ಪ್ರವೇಶಾವಕಾಶ ಕುರಿತು ಒತ್ತಡವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಇಂತಹ ಸಂದರ್ಭಗಳಲ್ಲಿ ಸದರಿ ಶಾಲೆಗಳಲ್ಲಿ ಹೆಚ್ಚು ಸೆಕ್ಷನ್‌ಗಳನ್ನು ತೆರೆದು ಮಕ್ಕಳ ಪ್ರವೇಶಾವಕಾಶ ಮಾಡಿಕೊಳ್ಳಲು ಅನುಮತಿ ನೀಡಲಾಗುವುದೇ?

ಇ) ಈ ಅನುಮತಿಯನ್ನು ಕೂಡಲೇ ಪರಿಶೀಲಿಸಿ ನೀಡಲು ಜಿಲ್ಲಾ ಮಟ್ಟದಲ್ಲಿ ಅಂದರೆ ಉಪನಿರ್ದೇಶಕರುಗಳಿಗೆ ಸಹನಿರ್ದೇಶಕರುಗಳಿಗೆ ಅಧಿಕಾರ ನೀಡಲಾಗುವುದೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ನೀಡಲಾಗುತ್ತಿದೆ.

ಇ) ಇಲ್ಲ.